ಮಂಡ್ಯ ವಿಶ್ವವಿದ್ಯಾಲಯ
ಎಂ.ಸಿ ರೋಡ್, ಮಂಡ್ಯ – ೫೭೧೪೦೧

**MANDYA UNIVERSITY**
**M.C Road, Mandya – 571401**

**Ph.No.**: 0232358788, **E-Mail**: re.mum@karnataka.gov.in **Website**: https://mandyauniversity.karnataka.gov.in

ಸಂಖ್ಯೆ:ಮಂ.ವಿ.ವಿ.ಮಂ/ಪ.ವಿ/21 /2025-26

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾಲಯ ಆಡಳಿತಭವನ,
ಮಂಡ್ಯ-571401.
ದಿನಾಂಕ: 16-05-2025

## ಪರೀಕ್ಷಾ ಶುಲ್ಕ ಅಧಿಸೂಚನೆ

ವಿಷಯ: Scheme - SEP-2024 ರ ಬ್ಯಾಚ್‌ನ ಜೂನ್/ಜುಲೈ-2025-26ರಲ್ಲಿ ನಡೆಯಲಿರುವ ದ್ವಿತೀಯ ಸೆಮಿಸ್ಟರ್‌ನ ಸ್ನಾತಕ ಪದವಿ (UG) ಪರೀಕ್ಷೆಯ ಬಗ್ಗೆ.

ಜೂನ್/ಜುಲೈ-2025-26ರ ಮಾಹೆಯಲ್ಲಿ ನಡೆಯಲಿರುವ ದ್ವಿತೀಯ ಸೆಮಿಸ್ಟರ್‌ನ(Scheme SEP-2024ರ ಬ್ಯಾಚ್‌ನ) **Fresher** ವಿದ್ಯಾರ್ಥಿಗಳ ಸ್ನಾತಕ ಪದವಿಯ ಪರೀಕ್ಷೆಗಳಾದ ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿ.ಬಿ.ಎ., ಬಿ.ಸಿ.ಎ, ಬಿ.ಎಸ್‌ಡಬ್ಲ್ಯೂ ಪರೀಕ್ಷೆಗಳು (Tentative) ದಿನಾಂಕ: 10-06-2025 ರಿಂದ ಪ್ರಾರಂಭವಾಗಲಿವೆ. ಈ ಸಂಬಂಧದ ವಿವರಗಳು ಕೆಳಕಂಡಂತಿವೆ.

| ಕ್ರ.ಸಂ | ವಿವರಗಳು | ಅಂತಿಮ ದಿನಾಂಕ |
|---|---|---|
| 1. | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕಗಳನ್ನು ಆನ್‌ಲೈನ್ ಮುಖಾಂತರ ದಿನಾಂಕ 16-05-2025 ರಿಂದ ಶುಲ್ಕ ಪಾವತಿಸಿ ಹಾಗೂ ಶುಲ್ಕ ಪಾವತಿಸಿದ ನಂತರ ಪರೀಕ್ಷಾ ಅರ್ಜಿಗಳನ್ನು ಕಛೇರಿಗೆ ಸಲ್ಲಿಸಲು (ವಿದ್ಯಾರ್ಥಿಗಳು **"uucms.karnataka.gov.in"** ಮುಖಾಂತರ ವಿದ್ಯಾರ್ಥಿಗಳ ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕಗಳನ್ನು ಪಾವತಿಸುವ ಸಂದರ್ಭದಲ್ಲಿ ನಿಮ್ಮ ಕೋರ್ಸಿನ **AEC/Languages, SEC** ಮತ್ತು **Open Elective** ಪತ್ರಿಕೆಗಳನ್ನು ಪರಿಶೀಲಿಸಿ ಆಯ್ಕೆ ಮಾಡಿಕೊಳ್ಳುವುದು). | 21-05-2025 |
| 2. | ರೂ. 100/- ಗಳ ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು **(with 1st penalty)** | 22-05-2025 |
| 3. | ರೂ 200/-ಗಳ ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು **(with 2nd & last penalty)** | 23-05-2025 |
| 4. | ಪ್ರವೇಶ ಪತ್ರಗಳನ್ನು ಮುದ್ರಿಸಿಕೊಳ್ಳುವ ದಿನಾಂಕ | 05-06-2025 |
| 5. | **Attendance and C1 & C2** ಅಂಕಗಳನ್ನು ಆನ್‌ಲೈನ್ ಮೂಲಕ ನಮೂದಿಸಲು ಕೊನೆಯ ದಿನಾಂಕ | 02-06-2025 |
| 6. | ಪ್ರಾಯೋಗಿಕ ಪರೀಕ್ಷೆಗಳನ್ನು ಪ್ರಾರಂಭಿಸಿ ಹಾಗೂ ಪೂರ್ಣಗೊಳಿಸುವ ದಿನಾಂಕ | 26-05-2025 ರಿಂದ 07-06-2025 |
| 7. | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ (Tentative) | 10-06-2025 |

**ಸೂಚನೆಗಳು:**

1. ದ್ವಿತೀಯ ಸೆಮಿಸ್ಟರ್‌ನ (SEP ಪದ್ಧತಿಯ) ಪರೀಕ್ಷಾ ಕಾರ್ಯಗಳು UUCMS ಮುಖಾಂತರ ಕಾಲೇಜಿನ ವತಿಯಿಂದ "Academic Module ನಲ್ಲಿ Curriculam Mapping" ಮಾಡಿದ ನಂತರ, ವಿದ್ಯಾರ್ಥಿಗಳು ಎಚ್ಚರಿಕೆಯಿಂದ ಆನ್‌ಲೈನ್ (UUCMS) ಮೂಲಕ ಪತ್ರಿಕೆಗಳನ್ನು ಆಯ್ಕೆ ಮಾಡಿಕೊಂಡು "mapping" ಮಾಡಿಕೊಳ್ಳಲು ಕಾಲೇಜಿನವರು Q.P Code/Course Code ಗಳನ್ನು ನೀಡಬೇಕು ಹಾಗೂ ಆನ್‌ಲೈನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸಲು ಮಾರ್ಗದರ್ಶನ ನೀಡಬೇಕು.

2. ಎಲ್ಲಾ ಪ್ರಾಯೋಗಿಕ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಗಳು ಮುಗಿದನಂತರ ಪೂರ್ಣಗೊಳಿಸುವುದು. ಸದರಿ ಪರೀಕ್ಷೆಯನ್ನು ಬಾಹ್ಯ ಪರೀಕ್ಷಕರು (External Examiners) ನಡೆಸುವುದು

3. ಪ್ರಾಯೋಗಿಕ ಪರೀಕ್ಷೆಗಳು ಮುಗಿದ ನಂತರ ಆ ದಿನದಂದೇ Online ಮುಖಾಂತರ ಅಂಕಗಳನ್ನು ಕಡ್ಡಾಯವಾಗಿ ನಮೂದಿಸುವುದು ಹಾಗೂ ಅಂಕಗಳ ಮೂಲಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು.

4. ವಿದ್ಯಾರ್ಥಿಗಳು ಭರ್ತಿ ಮಾಡಿದ ವಿಷಯಗಳ ಆಯ್ಕೆ (Subject Selection) ಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ಪರೀಕ್ಷಾ ಅರ್ಜಿಗಳಲ್ಲಿ ನ್ಯೂನತೆಗಳಿದ್ದರೆ, ಪ್ರವೇಶ ಪತ್ರಗಳ ಮುದ್ರಣಕ್ಕೆ ಪ್ರಾಂಶುಪಾಲರ ಅನುಮೋದನೆ ಪಡೆಯುವ ಮೊದಲು, ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿರುವ ಪತ್ರಿಕೆಗಳನ್ನು ಮತ್ತೊಮ್ಮೆ ಪರಿಶೀಲಿಸಿಕೊಳ್ಳುವುದು, ಇಲ್ಲದಿದ್ದರೆ ಕಾಲೇಜಿನ ಆಡಳಿತ ವರ್ಗ ಹಾಗೂ ಪ್ರಾಂಶುಪಾಲರು ಇಂತಹ ತಪ್ಪುಗಳಿಗೆ ಹೊಣೆಗಾರರಾಗಿರುತ್ತಾರೆ.

**ಪರೀಕ್ಷಾ ಶುಲ್ಕಗಳ ದರಗಳು**

| Sl. No. | Particulars | Fees details |
|---|---|---|
| 1. | **Grade Card Fees All Students** | **Rs. 426/-** |
| 2. | **Exam Application Processing Fees** | **Rs. 100/-** |
| 3. | **B.A/B.Com:**<br>**II Semester whole Examination**<br>**Per paper with Practical**<br>**Per paper without Practical** | **Rs. 1,172/-**<br>**Rs. 759/-**<br>**Rs. 585/-** |
| 4. | **B.Sc./B.C.A:**<br>**II Semester whole Examination**<br>**Per paper with Practical**<br>**Per paper without Practical** | **Rs. 1,318/-**<br>**Rs. 759/-**<br>**Rs. 585/-** |
| 5. | **B.B.A/ BSW**<br>**II Semester whole Examination**<br>**Per paper with Practical**<br>**Per paper without Practical** | **Rs. 1730/-**<br>**Rs. 1025/-**<br>**Rs. 585/-** |

## ಸೂಚನೆ:

**ತರಗತಿಯ ಹಾಜರಾತಿ ಶೇಕಡಾ 75% ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು C3 ಪರೀಕ್ಷೆಯನ್ನು ಬರೆಯಲು ಅರ್ಹರಾಗಿರುವುದಿಲ್ಲ"**

**ವಿಶೇಷ ಸೂಚನೆಗಳು:**

1. ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.
2. ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರತಿ ಚಾತುರ್ಮಾಸದ ಪರೀಕ್ಷೆಗೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ಜೊತೆಗೆ ಅಂಕಪಟ್ಟಿ ಶುಲ್ಕ ರೂ. 426/- ನ್ನು ಸಹ ಪಾವತಿಸತಕ್ಕದ್ದು.
3. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಖಾತೆಗೆ ವಿದ್ಯಾರ್ಥಿವೇತನವನ್ನು ನೇರವಾಗಿ ಜಮಾ ಮಾಡುತ್ತಿರುವುದರಿಂದ ಸದರಿ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಹಾಗೂ ಅಂಕಪಟ್ಟಿ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸಬೇಕು.
4. ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಆಯಾಯ ಕಾಲೇಜಿನವರು ಪರೀಕ್ಷೆಗಳು ಪ್ರಾರಂಭಾಗುವುದಕ್ಕೆ ಸಾಕಷ್ಟು ಮುಂಚಿತವಾಗಿ Online ಮೂಲಕ ಪ್ರಿಂಟ್ ಪಡೆದು ವಿತರಿಸುವುದು.

**ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ಲಿಖಿತ ಪರೀಕ್ಷೆಗಳಿಗೆ ಸಂಬಂಧಪಟ್ಟ ವಿವರವಾದ ವೇಳಾಪಟ್ಟಿಯನ್ನು ಈ ಕಛೇರಿಯಿಂದ ಮುಂದಿನ ದಿನಗಳಲ್ಲಿ ಕಳುಹಿಸಲಾಗುವುದು.
2. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಮತ್ತು ಅದನ್ನು ಮುಂದಿನ ಪರೀಕ್ಷೆಗಳಿಗೂ ಸರಿದೂಗಿಸಿಕೊಳ್ಳಲಾಗುವುದಿಲ್ಲ.
3. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಇತ್ತೀಚಿನ ಭಾವಚಿತ್ರದ ಮೇಲೆ ಪೂರ್ತಿ ಸಹಿ ಮಾಡಿ ವಿದ್ಯಾರ್ಥಿಯನ್ನು ಗುರುತಿಸಲಾಗಿದೆ ಎಂದು ಬರೆಯಿಸಿ ಪ್ರಾಂಶುಪಾಲರಿಂದ/ನಿರ್ದೇಶಕರುಗಳಿಂದ ಸಹಿ ಮಾಡಿಸಿ ಅವರ ಪ್ರವೇಶ ಪತ್ರಿಕೆಗೆ ಅಂಟಿಸಿ ಪರೀಕ್ಷಾ ಅರ್ಜಿಯೊಡನೆ ಪರೀಕ್ಷಾ ವಿಭಾಗಕ್ಕೆ ನೀಡಬೇಕು.
4. **ಭಾವಚಿತ್ರಗಳಿಲ್ಲದ ಹಾಗೂ ಕುಲಸಚಿವರು (ಪರೀಕ್ಷಾಂಗ) ಇವರ ಸಹಿ/ಮೊಹರು ಇಲ್ಲದ ಪ್ರವೇಶಪತ್ರಗಳನ್ನು ಪರೀಕ್ಷಾ ಕೊಠಡಿಯಲ್ಲಿ ಹಾಜರುಪಡಿಸುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ಕೊಡುವುದಿಲ್ಲ.**

**ಪ್ರಾಂಶುಪಾಲರುಗಳಿಗೆ ಸಾಮಾನ್ಯ ಸೂಚನೆಗಳು:**

1. ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಮಾಹಿತಿಯನ್ನು Online ಮೂಲಕ ಎಂಟ್ರಿ ಮಾಡಿದ ನಂತರ ಕಾಲೇಜು ಹಂತದಲ್ಲಿಯೇ ಪ್ರವೇಶ ಪತ್ರಗಳನ್ನು ಮುದ್ರಿಸುವ ವ್ಯವಸ್ಥೆಯನ್ನು ಮಾಡಲಾಗುವುದು.

2. ಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಮೊಹರು ಮಾಡಿದ ಕವರುಗಳಲ್ಲಿ ಇಟ್ಟು ಕೇಂದ್ರದಲ್ಲಿ ನಡೆಯುವ ಎಲ್ಲಾ ವಿಷಯಗಳ ಪ್ರಾಯೋಗಿಕ ಪರೀಕ್ಷೆಗಳು ಮುಗಿದ ದಿನವೇ ಕಳುಹಿಸಬೇಕು. ಈ ದಿನಾಂಕ ಮೀರಿ ಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಕಳುಹಿಸುವಂತಹ ಕಾಲೇಜುಗಳಿಗೆ/ಸಂಸ್ಥೆಗಳಿಗೆ ಸೇರಿದ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳು ತಡವಾಗಿ ಪ್ರಕಟವಾಗುವ ಸಂಭವವನ್ನು ತಪ್ಪಿಸಲು ಜಾಗರೂಕರಾಗಿರಲು ಕೋರಲಾಗಿದೆ. ಉತ್ತರ ಪತ್ರಿಕೆಗಳ ಕಟ್ಟುಗಳಲ್ಲಿ (Answer Book Bundles) ಅಂಕಪಟ್ಟಿಗಳನ್ನು ಕಳುಹಿಸಬಾರದೆಂದು ಸೂಚಿಸಲಾಗಿದೆ. ಅಂಕಪಟ್ಟಿಗಳನ್ನು ತಯಾರಿಸುವಾಗ ವಿದ್ಯಾರ್ಥಿಯ ನೋಂದಣಿ ಸಂಖ್ಯೆಯನ್ನು (Register Number)

ಪೂರ್ಣವಾಗಿ ಬರೆಯಬೇಕೆಂಬ ವಿಚಾರವನ್ನು ಎಲ್ಲಾ ಪ್ರಾಯೋಗಿಕ ಅಂಕಗಳ ಪಟ್ಟಿಯನ್ನು ಪ್ರಾಯೋಗಿಕ ಪರೀಕ್ಷಕರಿಗೆ ತಿಳಿಸಲಾಗಿದೆ ಹಾಗೂ ಸಂಬಂಧಪಟ್ಟ ಪ್ರಾಯೋಗಿಕ ಪತ್ರಿಕೆಯ ನಿಖರವಾದ ಕೋಡ್ ನಂಬರನ್ನು ತಪ್ಪದೆ ಬರೆಯಬೇಕೆಂಬ ವಿಚಾರವನ್ನು ಸಹ ಪ್ರಾಯೋಗಿಕ ಪರೀಕ್ಷಕರಿಗೆ ತಿಳಿಸಲಾಗಿದೆ. ಪ್ರಾಯೋಗಿಕ ಪರೀಕ್ಷಕರಿಗೆ ಪ್ರಾಯೋಗಿಕ ಅಂಕಗಳ ಪಟ್ಟಿಯನ್ನು (Marks List) ಒದಗಿಸುವುದಕ್ಕಿಂತ ಮೊದಲು ಆಯಾಯಾ ಕೇಂದ್ರದ ಮೊಹರನ್ನು (Seal) ಮಾರ್ಕ್ಸ್ ಲಿಸ್ಟ್‌ನ ಕೆಳಗಡೆ ಮಧ್ಯಭಾಗದಲ್ಲಿ ತಪ್ಪದೆ ಹಾಕಬೇಕು.

3. ವಿದ್ಯಾರ್ಥಿಗಳು ಗೈರುಹಾಜರಾದಲ್ಲಿ ಆ ಪರೀಕ್ಷಾ ದಿನದಂದೇ ಆನ್‌ಲೈನ್ ಮುಖಾಂತರ ಗೈರುಹಾಜರಿಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

ಆದೇಶದ ಮೇರೆಗೆ

16/5/2025

ಕುಲಸಚಿವರು(ಪರೀಕ್ಷಾಂಗ)

ಕುಲಸಚಿವರು (ಮೌಲ್ಯಮಾಪನ)
ಮಂಡ್ಯ ವಿಶ್ವವಿದ್ಯಾಲಯ
ಮಂಡ್ಯ-571401

ಗೆ:

1. ಮಂಡ್ಯ ವಿಶ್ವವಿದ್ಯಾಲಯದ ಸಂಯೋಜನೆಗೊಂಡಿರುವ ಎಲ್ಲಾ ಸ್ನಾತಕ ಕಾಲೇಜಿನ ಪ್ರಾಂಶುಪಾಲರ ಮಾಹಿತಿಗಾಗಿ.
2. ಕುಲಸಚಿವರು (ಆಡಳಿತ), ಮಂಡ್ಯ ವಿಶ್ವವಿದ್ಯಾಲಯ, ಮಂಡ್ಯ.
3. ಹಣಕಾಸು ಅಧಿಕಾರಿಗಳು, ಮಂಡ್ಯ ವಿಶ್ವವಿದ್ಯಾಲಯ, ಮಂಡ್ಯ
4. ಪ್ರಾಂಶುಪಾಲರು ಘಟಕ ಕಾಲೇಜು ರವರ ಮಾಹಿತಿಗಾಗಿ, ಮಂಡ್ಯ ವಿಶ್ವವಿದ್ಯಾಲಯ, ಮಂಡ್ಯ.
5. ಮಾನ್ಯ ಕುಲಪತಿಗಳ/ಕುಲಸಚಿವರು/ಕುಲಸಚಿವ(ಪರೀಕ್ಷಾಂಗ) ಆಪ್ತ ಶಾಖೆ.
6. ಈ ಅಧಿಸೂಚನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
7. ಕಛೇರಿ ಪ್ರತಿ.